ಚಲನಚಿತ್ರಗಳಿಗೆ ಸಹಾಯಧನ ನೀಡಂವ ಕುರಿತು

೬೦೧. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಪೌರ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕರ್ನಾಟಕ ರಾಜ್ಯದಲ್ಲಿ ನಿರ್ಮಾಣಗೊಂಡಿರುವ ಕನ್ನಡ ಚಲನಚಿತ್ರಗಳಿಗೆ ಹಾಗೂ ಹೊರ ರಾಜ್ಯಗಳಲ್ಲಿ ನಿರ್ಮಾಣವಾದ ಚಲನಚಿತ್ರಗಳಿಗೆ ೧೯೮೭ ರಿಂದ ೨೮-೨-೮೯ರವರೆಗೆ ನೀಡಲಾದ ಸಬ್ಸಿಡಿ ಹಣದ ಮೊತ್ತವೆಷ್ಟು ?

ಆ) ಇತರೆ ಭಾಷೆಗಳಿಂದ ರೀಮೇಕ್ ಆಗಿ ನಿರ್ಮಾಣಗೊಂಡ ಚಲನಚಿತ್ರಗಳಿಗೂ ಸಹ ಸಬ್ಸಿಡಿ ನೀಡಲಾಗುತ್ತಿದೆಯೇ ?

ಇ) ಹಾಗಿದ್ದಲ್ಲಿ ರೀಮೇಕ್ ಆಗಿ ನಿರ್ಮಾಣಗೊಂಡ ಚಲನಚಿತ್ರಗಳಿಗೆ ನೀಡಿದ ಸಬ್ಸಿಡಿ ಮೊತ್ತ ಹಾಗೂ ಚಿತ್ರದ ವಿವರಗಳನ್ನು ಒದಗಿಸುವುದು.

ಶ್ರೀ ಎಂ.ಪಿ. ಪ್ರಕಾಶ್ (ಪೌರ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಮಂತ್ರಿಗಳು).—

ಅ) ಹೊರ ರಾಜ್ಯದಲ್ಲಿ ನಿರ್ಮಾಣಗೊಂಡ ಚಲನಚಿತ್ರಗಳಿಗೆ ಸಬ್ಸಿಡಿ ಹಣ ನೀಡುವ ನಿಯಮ ಇರುವುದಿಲ್ಲ. ರಾಜ್ಯದಲ್ಲಿ ತಯಾರಾದಂತಹ ಚಲನಚಿತ್ರಗಳಿಗೆ ೧೯೮೭ ರಿಂದ ೨೮-೨-೮೯ರವರೆಗೆ ಒಟ್ಟು ೪೬.೭೫ ಲಕ್ಷ ರೂ. ಸಹಾಯಧನ ನೀಡಲಾಗಿದೆ.

ಆ) —ಇಲ್ಲ—

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ಮಂಡಳಿ ಇಟ್ಟಿಗೆ ಹಾಗೂ ಮರಮುಟ್ಟುಗಳನ್ನು ತಯಾರಿಸುವ ಕಾರ್ಖಾನೆಯನ್ನು ಹೊಂದಿರುವುದರ ಬಗ್ಗೆ

೬೦೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಪೌರ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕರ್ನಾಟಕ ಗೃಹ ಮಂಡಳಿಯು ತಾನು ನಿರ್ಮಿಸಿರುವ ಮನೆಗಳ ಕೆಲಸಕ್ಕೆ ಬಳಸಲು ಇಟ್ಟಿಗೆ ಹಾಗೂ ಮರಮುಟ್ಟುಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಹೊಂದಿದೆಯೇ ?

ಆ) ಈ ಕಾರ್ಖಾನೆಗಾಗಿ ಮಂಡಳಿ ವೆಚ್ಚ ಮಾಡಿರುವ ಹಣದ ವಿವರವೆಷ್ಟು ;

ಇ) ಈ ಕಾರ್ಖಾನೆಯು ಲಾಭ ನಷ್ಟದ ವಿವರಗಳೇನು ? (ಕಾರ್ಖಾನೆ ಸ್ಥಾಪನೆಯಾದಾಗಿನಿಂದ ಈವರೆಗೆ)

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ರೂ. ೨೪.೩೯ ಲಕ್ಷಗಳು

ಇ) ೧೯೭೧ ರಿಂದ ೧೯೮೪ರವರೆಗೆ ಒಟ್ಟಿನಲ್ಲಿ ಅನುಭವಿಸಿದ ನಿವ್ವಳ ನಷ್ಟ ೩.೨೭ ಲಕ್ಷಗಳು

ಪುರಸಭೆ, ನಗರಸಭೆ, ಮಹಾನಗರಪಾಲಿಕೆ ಚುನಾವಣೆ

೬೦೩. ಪಿ. ಎಂ. ಚಿಕ್ಕಜೋಗಯ್ಯ (ಚಾಮರಾಜ).—ಪೌರ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಡಳಿತಾಧಿಕಾರಿಯನ್ನು ನೇಮಿಸಲಾಗಿರುವ ನಗರಪಾಲಿಕೆಗಳು ಹಾಗೂ ನಗರಸಭೆಗಳಿಗೆ ಯಾವಾಗ ಚುನಾವಣೆಗಳನ್ನು ನಡೆಸಲಾಗುವುದು;

ಆ) ಹೆಚ್ಚಿರುವ ಜನಸಂಖ್ಯೆಗೆ ಅನುಗುಣವಾಗಿ, ಕ್ಷೇತ್ರಗಳ ಪುನರ್ವಿಂಗಡಣೆ ಮಾಡಲು ಕ್ಷೇತ್ರ ವಿಂಗಡಣಾ ಆಯೋಗ ರಚಿಸಲು ಉದ್ದೇಶಿಸಲಾಗಿದೆಯೆ ;